**ಓ ಎಸ್ ನಂಃ 31–2015**

**ಪಿ ಡಬ್ಲ್ಯೂ:1**

( ಮದ್ಯಂತರ ಅರ್ಜಿ ನಂಬರ 4 ನೇದರ ಆದೇಶ ಮೇರೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ದಿನಾಂಕ 23–01–2017 ರಂದು ಪ್ರಮಾಣ ವಚನ ಮಾಡಿಸಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಎಂ ಪಿ ಬಿ ವಕೀಲರಿಂದಃ** ಅಧ್ಯಕ್ಷರು ಗ್ರಾಮ ಪಂಚಾಯತಿ ಬೆಲೆಕೇರಿ ಇವರು ನೀಡಿದ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು, ಸದರಿ ಪ್ರಮಾಣ ಪತ್ರವನ್ನು ನಿಶಾನೆಗೊಳಿಸಲು ಪ್ರತಿವಾದಿ ಪರ ವಕೀಲರು ತಕರಾರು ಮಾಡಿದ್ದರಿಂದ ತಕರಾರಿಗೆ ಒಳಪಟ್ಟು ಅದನ್ನು ನಿಪಿ–7 ಎಂದು, ಒಡಂಬಡಿಕೆ ಪತ್ರವನ್ನು ಹಾಜರುಪಡಿಸುತ್ತಿದ್ದು, ಸದರಿ ಒಡಂಬಡಿಕೆ ಪತ್ರವನ್ನು ನಿಶಾನೆಗೊಳಿಸಲು ಪ್ರತಿವಾದಿ ಪರ ವಕೀಲರು ತಕರಾರು ಮಾಡಿದ್ದರಿಂದ ತಕರಾರಿಗೆ ಒಳಪಟ್ಟು ಅದನ್ನು ನಿಪಿ–8 ಎಂದು, ಕರಾರು ಪತ್ರವನ್ನು ಹಾಜರುಪಡಿಸುತ್ತಿದ್ದು, ಸದರಿ ಕರಾರು ಪತ್ರವನ್ನು ನಿಶಾನೆಗೊಳಿಸಲು ಪ್ರತಿವಾದಿ ಪರ ವಕೀಲರು ತಕರಾರು ಮಾಡಿದ್ದರಿಂದ ತಕರಾರಿಗೆ ಒಳಪಟ್ಟು ಅದನ್ನು ನಿಪಿ–9 ಎಂದು, ಒಟ್ಟು 14 ಫೋಟೋಗಳನ್ನು ಹಾಜರುಪಡಿಸುತ್ತಿದ್ದು, ಅವುಗಳನ್ನು ಕ್ರಮವಾಗಿ ನಿಪಿ–10 ರಿಂದ ನಿಪಿ–23 ಎಂದು, ಫೋಟೋಗಳಿಗೆ ಸಂಬಂಧಿಸಿದ ಸಿಡಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು ನಿಪಿ–24 ಎಂದು, ಸದರಿ ಫೋಟೋಗಳು ನಾಗದೇವತೆ ಪೂಜೆ ಮಾಡಿದ ಕುರಿತು ಫೋಟೋಗಳಾಗಿರುತ್ತವೆ. ಸದರಿ ಫೋಟೋದಲ್ಲಿ ಬಾವಿ ಕೂಡಾ ಕಾಣಿಸುತ್ತದೆ. ಕಾರಣ ನಾನು ದಾವೆಯಲ್ಲಿ ಬೇಡಿಕೊಂಡಂತೆ ಡಿಕ್ರಿ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

_( ಪಾಟೀ ಸವಾಲಿಗೆ ಶ್ರೀಮತಿ ಎಸ್ ಎನ್ ಹೆಚ್ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಖ್ತಲೇಖನದಲ್ಲಿ ಬೆರಳಚ್ಚಿಸಲಾಯಿತು)

ಓ.ಹೆ.ಕೆ. ಸರಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಅಂಕೋಲಾ.